ಸಾಕ್ಷಿಗೆ ದಿನಾಂಕಃ 11-06-2024 ರಂದು ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಕೆಪಿ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯಾಗಿ ನಾನೇ ಶಪಥೀಕರಿಸಿರುವ ಪ್ರಮಾಣ ಪತ್ರ ಹಾಜರು ಪಡಿಸಿದ್ದೇನೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು ಸಹಿಗಳು ನನ್ನವುಗಳೇ ಆಗಿವೆ.

ಈ ದಾವೆಗೆ ಸಂಬಂಧಪಟ್ಟಂತೆ ಫ್ರಾಸಾ-1 ರವರಿಗೆ ಅವರ ತಾತ ಮುನಿವೆಂಕಟಪ್ಪ ವಿಲ್ ನಾಮೆ ಬರೆದುಕೊಟ್ಟಿರುತ್ತಾರೆ. ಸದರಿ ವಿಲ್ ನಾಮೆಗೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಫ್ರಾಸಾ-2 ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಕೃಷ್ಣಪ್ಪ ಬರೆದು, ನನ್ನ ಸಮಕ್ಷಮ ಸಹಿ ಮಾಡಿದ್ದಾರೆ. ಸದರಿ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ವೈ.ಎ.ಎಸ್ ವಕೀಲರ ಕೋರಿಕೆಯಂತೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

(ಮಂಜುನಾಥ ಜಿ ಎ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.

ಸಾಕ್ಷಿಗೆ ದಿನಾಂಕಃ 13-08-2024ರಂದು ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು
ಪಾಟೀ ಸವಾಲುಃ ಶ್ರೀ ಎಂಪಿಆರ್ ವಕೀಲರಿಂದ ಪ್ರತಿವಾದಿಗಳ ಪರ

ವೀರಾಂಜನೇಯ ನಗರ ಮತ್ತು ಹಾರೋಹಳ್ಳಿ ಒಂದೇ. ನನ್ನ ಮನೆಯಿಂದ ವಾದಿಯ ಮನೆಗೆ ಅರ್ಧ ಕಿಮೀ ದೂರ. ಎಂ.ಕೃಷ್ಣಪ್ಪ ಬಿಕ್ಲಂದಾರರು ವಿಲ್ ನಾಮೆಗೆ ಸಾಕ್ಷಿ ಸಹಿ ಹಾಕಲು ಕರೆದರು. ನಾನು ಕೇಳಲಾಗಿ ಕೃಷ್ಣಪ್ಪ ಒಂದು ವಿಲ್ ನಾಮೆಗೆ ಸಹಿ ಮಾಡು ಎಂದು ಕೇಳಿದರು. ಮೊಮ್ಮಗನ ಹೆಸರಿಗೆ ಮಾಡಿದ್ದಾರೆ ಸಹಿ ಮಾಡು ಎಂದು ಹೇಳಿದರು. ಮುನಿವೆಂಕಟಪ್ಪ ಸುಗಟೂರು ವಾಸಿ. ಮಹೇಂದ್ರನ ತಾಯಿ ನನ್ನ ತಾಯಿಯ ತಂಗಿ, ಚಿಕ್ಕಮ್ಮ. ಮುನಿವೆಂಕಟಪ್ಪನ ಕುಟುಂಬದ ಬಗ್ಗೆ ಅಷ್ಟಾಗಿ ಗೊತ್ತಿಲ್ಲ, ಮಹೇಂದ್ರ ಅವರ ಕುಟುಂಬದ ಬಗ್ಗೆ ಗೊತ್ತಿದೆ. ವಾದಿಯ ಅಪ್ಪ ಸುಗಟೂರು ಕೆರೆಯಲ್ಲಿ ಒಂದು- ಒಂದೂವರೆ ವರ್ಷಗಳ ಹಿಂದೆ ಮೃತ ಪಟ್ಟಿದ್ದಾರೆ. ವಾದಿಯ ತಂದೆ ಸುಗಟೂರಿನ ತಮ್ಮ ಜಮೀನಿನ ಮನೆಯಲ್ಲಿ ವಾಸ ಇದ್ದರು. ಮುನಿವೆಂಕಟಪ್ಪ ವಾದಿಯ ತಂದೆ ಜೊತೆಯಲ್ಲಿ ವಾಸ ಇದ್ದರು. ಅವರಿಬ್ಬರೂ ಜಮೀನಿನ ಮನೆಯಲ್ಲಿ ವಾಸ ಇದ್ದರು. ನಾನು ದಾವಾ ಜಮೀನು ಮತ್ತು ಮನೆ ನೋಡಿದ್ದೇನೆ. ಜಮೀನಿನಲ್ಲಿ ಎರಡು ಮನೆ ಇವೆ. ಯಾವ ಮನೆ ಯಾರದು ಗೊತ್ತಿಲ್ಲ. ವೆಂಕಟೇಶಪ್ಪ ಸಾಯುವವರಿಗೂ ಸುಗಟೂರಿನಲ್ಲಿಯೇ ವಾಸ ಇದ್ದರು. ಹಾರೋಹಳ್ಳಿಯಲ್ಲೂ ಕೂಡ ಸುಮಾರು ದಿನ ಇದ್ದರು.

ಕೃಷ್ಣಪ್ಪ ಬಿಕ್ಲಂದಾರರೇ ಮುನಿವೆಂಕಟಪ್ಪನನ್ನು ನೋಂದಣಿ ಕಛೇರಿಗೆ ಕರೆದುಕೊಂಡು ಬಂದಿದ್ದರು. ಮುನಿವೆಂಕಟಪ್ಪನವರಿಗೆ ನಿಮ್ಮ ಮಗ ಏಕೆ ಬಂದಿಲ್ಲ ಎಂದು ವಿಚಾರಣೆ ಮಾಡಲಿಲ್ಲ. ನಿಪಿ-1 ಬರೆದುಕೊಟ್ಟಿದ್ದಾರೆ ಎನ್ನುವ ಕಾಲಕ್ಕೆ ಮುನಿವೆಂಕಟಪ್ಪ ಆರೋಗ್ಯವಾಗಿದ್ದರು, ನಿಪಿ-1 ಕ್ಕೆ ಸಹಿ ಮಾಡುವ ಮೊದಲು ಅದರ ಅಂಶಗಳನ್ನು ಓದಿ ತಿಳಿದುಕೊಳ್ಳಲಿಲ್ಲ. ನೋಂದಣಿ ಕಛೇರಿಯಲ್ಲಿ ನೋಂದಣಿ ಅಧಿಕಾರಿ ಅಥ್ವಾ ಸದರಿ ಕಛೇರಿಯ ಸಿಬ್ಬಂದಿ ವಿಲ್ ನಾಮೆಯ ಸಂಗತಿಗಳನ್ನು ಮುನಿವೆಂಕಟಪ್ಪರವರಿಗೆ ಓದಿ ತಿಳಿಸಿದ್ದನ್ನು ನಾನು ನೋಡಿಲ್ಲ. ನಿಪಿ-1ರ ಕಾಲಕ್ಕೆ ಮುನಿವೆಂಕಟಪ್ಪನವರಿಗೆ ಓಡಾಡಲು ಸಾಧ್ಯವಾಗದಷ್ಟು ಆರೋಗ್ಯ ಹದಗೆಟ್ಟಿತ್ತು ಎಂದರೆ ಸರಿಯಲ್ಲ. ಅವರು ಕೋಲು ಹಿಡಿದು ಓಡಾಡುತ್ತಿದ್ದರು. ಮುನಿವೆಂಕಟಪ್ಪನ ಕುಟುಂಬದ ಸದಸ್ಯರು ವಿಲ್ ಬರೆಯುವಾಗ ಯಾರೂ ಇರಲಿಲ್ಲ. ಮುನಿವೆಂಕಟಪ್ಪನಿಗೆ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ.

ನಾನು ಇನ್ನೊಬ್ಬ ಸಾಕ್ಷಿ ವಾದಿ ಸೇರಿ ಪ್ರತಿವಾದಿಗಳಿಂದ ದಾವಾ ಆಸ್ತಿ ಲಪಟಾಯಿಸಲು ನಿಪಿ-1 ಬನಾವಟ್ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

(ಮಂಜುನಾಥ ಜಿ ಎ)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.

ಸಾಕ್ಷಿಗೆ ದಿನಾಂಕಃ 11-06-2024 ರಂದು ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಕೆಪಿ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯಾಗಿ ನಾನೇ ಶಪಥೀಕರಿಸಿರುವ ಪ್ರಮಾಣ ಪತ್ರ ಹಾಜರು ಪಡಿಸಿದ್ದೇನೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು ಸಹಿಗಳು ನನ್ನವುಗಳೇ ಆಗಿವೆ.

ಈ ದಾವೆಗೆ ಸಂಬಂಧಪಟ್ಟಂತೆ ಫ್ರಾಸಾ-1 ರವರಿಗೆ ಅವರ ತಾತ ಮುನಿವೆಂಕಟಪ್ಪ ವಿಲ್ ನಾಮೆ ಬರೆದುಕೊಟ್ಟಿರುತ್ತಾರೆ. ಸದರಿ ವಿಲ್ ನಾಮೆಗೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ವೇಣು ಎನ್ನುವವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಕೃಷ್ಣಪ್ಪ ಬರೆದು, ನನ್ನ ಸಮಕ್ಷಮ ಸಹಿ ಮಾಡಿದ್ದಾರೆ. ಸದರಿ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ವೈ.ಎ.ಎಸ್ ವಕೀಲರ ಕೋರಿಕೆಯಂತೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

(ಮಂಜುನಾಥ ಜಿ ಎ)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.

ಸಾಕ್ಷಿಗೆ ದಿನಾಂಕಃ 13-08-2024 ರಂದು ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ಶ್ರೀ ಎಂಪಿಆರ್ ವಕೀಲರಿಂದ ಪ್ರತಿವಾದಿಗಳ ಪರ

ನನ್ನ ಸ್ವಂತ ಊರು ಸುಗಟೂರು ಪಕ್ಕ ಇರುವ ಜನ್ನಘಟ್ಟ. ನಮ್ಮ ಊರಿನಿಂದ ಸುಗಟೂರಿಗೆ ಒಂದು ಮೈಲಿ ದೂರ. ನಾನು ಕೋಲಾರಕ್ಕೆ ಬಂದು 25 ವರ್ಷದಿಂದ ಬಂದು ಹೋಗುತ್ತಿದ್ದೇನೆ. ನಾನು ಎರಡೂ ಕಡೆ ವಾಸ ಇರುತ್ತೇನೆ. ಕೋಲಾರದಲ್ಲಿ ಮಗ ಕೆಲಸ ಮಾಡುತ್ತಾನೆ. ಕೋಲಾರದ ವಿಳಾಸಕ್ಕೆ ಆಧಾರ್ ಕಾರ್ಡ್, ಮತದಾರರ ಚೀಟಿ ಇರುತ್ತದೆ.

ಸುಗಟೂರಿನ ಮುನಿವೆಂಕಟಪ್ಪ ಗೊತ್ತು. ನಾನು ನಿವೃತ್ತ ಮುಖ್ಯಪೇದೆ ಹಾಗಾಗಿ ಅವರ ಪರಿಚಯ ಇರುತ್ತದೆ. ನಿಪಿ-1(ಎ) ನನ್ನ ಸಹಿ. ಸಹಿಯನ್ನು ನೋಂದಣಿ ಕಛೇರಿಯಲ್ಲಿ ವಿಲ್ ನಾಮೆಗೆ ಮಾಡಿದ್ದೇನೆ. ವಿಲ್ ನಾಮೆ ಮಾಡುವಾಗ ಯಜಮಾನರಾದ ಮುನಿವೆಂಕಟಪ್ಪ, ವೇಣು, ಬಿಕ್ಲಂ ಕೃಷ್ಣಪ್ಪ, ನಾನು ಇದ್ದೆವು. ಮುನಿವೆಂಕಟಪ್ಪನವರ ಕುಟುಂಬಸ್ಥರು ಯಾರಾದರೂ ಬಂದ ಬಗ್ಗೆ ನನಗೆ ಗೊತ್ತಿಲ್ಲ. ಮುನಿವೆಂಕಟಪ್ಪನಿಗೆ ಎಷ್ಟು ಸಂತಾನ ಗೊತ್ತಿಲ್ಲ. ಅವರಿಗೆ ಒಬ್ಬ ಮಗ ವೆಂಕಟೇಶಪ್ಪ ಇರುವುದು ಗೊತ್ತಿದೆ. ವೆಂಕಟೇಶಪ್ಪ ಮುನಿವೆಂಕಟಪ್ಪನವರ ಮಗ ಗೊತ್ತು. ಮುನಿವೆಂಕಟಪ್ಪನಿಗೆ ತನ್ನ ಕುಟುಂಬದ ಸದಸ್ಯರು ಏಕೆ ಬಂದಿಲ್ಲ ಎಂದು ನಾನು ಕೇಳಲಿಲ್ಲ. ಮುನಿವೆಂಕಟಪ್ಪನಿಗೆ ಆಗ 85 ರಿಂದ 90 ವರ್ಷ ಆಗಿರಬಹುದು. ಆ ಕಾಲಕ್ಕೆ ಅವರು ಸುಗಟೂರಿನಲ್ಲಿ ವಾಸ ಇದ್ದರು. ನಿಪಿ-1 ವಿಲ್ ಮಾಡುವ ಕಾಲಕ್ಕೆ ಅವರ ಆರೋಗ್ಯ ತುಂಬ ಹದಗೆಟ್ಟಿತ್ತು ಎಂದರೆ ಸರಿ. ಮುನಿವೆಂಕಟಪ್ಪನನ್ನು ನೋಂದಣಿ ಕಛೇರಿಗೆ ಯಾರು ಕರೆದುಕೊಂಡು ಬಂದಿದ್ದರು ಎಂದು ನಾನು ಕೇಳಲಿಲ್ಲ. ಏಕೆ ಒಬ್ಬರಿಗೆ ಮಾತ್ರ ವಿಲ್ ನಾಮೆ ಬರೆಯುತ್ತಿದ್ದೀರಾ ಎಂದು ಮುನಿವೆಂಕಟಪ್ಪನನ್ನು ನಾನು ಕೇಳಲಿಲ್ಲ, ಕಾರಣ ಅದು ಅವರ ಇಚ್ಛೆ ಎಂದು ಉತ್ತರಿಸಿದ್ದಾರೆ. ವಿಲ್ ನಾಮೆ ನಾನು ಓದಿದ್ದೇನೆ. ನಾನು ನಿಪಿ-1 ವಿಲ್ಲನ್ನು ಓದಿ ಮುನಿವೆಂಕಟಪ್ಪನಿಗೆ ಹೇಳಿದೆ. ನಿಪಿ-1 ರ ಕಾಲಕ್ಕೆ ತನ್ನ ಆರೋಗ್ಯ ಸರಿ ಇಲ್ಲ ಎಂದು ಮುನಿವೆಂಕಟಪ್ಪ ಬರೆಸಿದ್ದಾರೆ ಎಂದರೆ ಸರಿ. ಅವರಿಗೆ ಯಾವ ರೀತಿ ಅನಾರೋಗ್ಯ ಇತ್ತು ಎಂದು ನಾನು ಕೇಳಿ ತಿಳಿದುಕೊಳ್ಳಲಿಲ್ಲ. ಅವರು ಕೋಲಾರದಲ್ಲಿ ವಾಸ ಇರುವ ಬಗ್ಗೆ ಏನೂ ಹೇಳಿರುವುದಿಲ್ಲ. ನಾನು ವಾದಿಯ ತಂದೆಯ ಹತ್ತಿರದ ಸ್ನೇಹಿತ ಎಂದರೆ ಸರಿಯಲ್ಲ. ನಾನು ವಾದಿಯ ತಂದೆ ಮುನಿವೆಂಕಟಪ್ಪನಿಗೆ ಕಣ್ಣು ಕಾಣದೇ ಇದ್ದರೂ ಆತನಿಗೆ ನೋಂದಣಿ ಕಛೇರಿಗೆ ಕರೆದುಕೊಂಡು ಹೋಗಿ ವಿಲ್ ನಾಮೆ ಬನಾವಟ್ ಮಾಡಿದ್ದೇವೆ ಎಂದರೆ ಸರಿಯಲ್ಲ.

ಮುನಿವೆಂಕಟಪ್ಪನ ಕುಟುಂಬಕ್ಕೆ ದಾವಾ ಆಸ್ತಿ ಒಂದೇ ಇರುವುದು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸರ್ವೇ ನಂಬರ್ 181, 3 ಎಕರೆ 15 ಗುಂಟೆ ವಿಸ್ತೀರ್ಣ. ಜಮೀನನ್ನು ನಾನು ನೋಡಿಲ್ಲ. ನನಗೆ ಮುನಿವೆಂಕಟಪ್ಪನ ಕುಟುಂಬದ ಬಗ್ಗೆ ಏನೂ ಗೊತ್ತಿಲ್ಲದೇ ಇದ್ದರೂ, ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

(ಮಂಜುನಾಥ ಜಿ ಎ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.

ಸಾಕ್ಷಿಗೆ ದಿನಾಂಕಃ 04-04-2024 ರಂದು ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಕೆಪಿ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯಾಗಿ ನಾನೇ ಶಪಥೀಕರಿಸಿರುವ ಪ್ರಮಾಣ ಪತ್ರ ಹಾಜರು ಪಡಿಸಿದ್ದೇನೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು ಸಹಿಗಳು ನನ್ನವುಗಳೇ ಆಗಿವೆ.

ಈ ದಾವೆಗೆ ಸಂಬಂಧಪಟ್ಟಂತೆ ದಿನಾಂಕಃ 16-04-2021 ರ ನೊಂದಣಿ ವಿಲ್ ನಾಮೆ ಹಾಜರು ಪಡಿಸಿದ್ದೇನೆ ಅದನ್ನು ನಿಪಿ-1 ಎಂದು, ನನ್ನ ತಾತನ ಮರಣ ಪ್ರಮಾಣಪತ್ರವನ್ನು ನಿಪಿ-2 ಎಂದು, ಪಹಣಿಯನ್ನು ನಿಪಿ-3 ಎಂದು, ಮ್ಯುಟೇಶನ್ ವಹಿಯನ್ನು ನಿಪಿ-4 ಎಂದು, ವಂಶವೃಕ್ಷವನ್ನು ಪ್ರಮಾಣಪತ್ರವನ್ನು ನಿಪಿ-5 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಎನ್.ಎ.ಎಸ್ ವಕೀಲರ ಕೋರಿಕೆಯಂತೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

(ಮಂಜುನಾಥ ಜಿ ಎ)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.

ಸಾಕ್ಷಿಗೆ ದಿನಾಂಕಃ 13-08-2024 ರಂದು ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ಶ್ರೀ ಎಂಪಿಆರ್ ವಕೀಲರಿಂದ ಪ್ರತಿವಾದಿಗಳ ಪರ

ನಾನು ಬಿ.ಎಸ್.ಸಿ ಓದಿದ್ದೇನೆ. ನನ್ನ ತಂದೆ ಮೃತ ಪಟ್ಟಿದ್ದಾರೆ. ನನ್ನ ತಾಯಿ ಜೀವಂತ ಇದ್ದಾರೆ. ನನ್ನ ತಮ್ಮಂದಿರು ಇದ್ದಾರೆ. ನಾವೆಲ್ಲರೂ ಕೋಲಾರದ ಹಾರೋಹಳ್ಳಿಯಲ್ಲಿ ವಾಸವಾಗಿದ್ದೇನೆ. 2007 ರಿಂದ ಹಾರೋಹಳ್ಳಿಯಲ್ಲಿ ವಾಸ ಇದ್ದೇವೆ. ಅದಕ್ಕೂ ಮೊದಲು ಸುಗಟೂರು ಗ್ರಾಮದಲ್ಲಿ ವಾಸ ಇದ್ದೆವು. ನನ್ನ ತಂದೆ ತಾಯಿ ಸುಗಟೂರಿನ ವಾಸಿಗಳು ಎಂದು ತೋರಿಸಲು ದಾಖಲೆ ಇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ನನ್ನ ತಾತ ಮುನಿವೆಂಕಟಪ್ಪನಿಗೆ ನಾಲ್ಕು ಜನ ಮಕ್ಕಳು. ಎರಡು ಗಂಡು, ಎರಡು ಹೆಣ್ಣು ಮಕ್ಕಳು. ಲಕ್ಷ್ಮಮ್ಮ ಡಿ-2, ನನ್ನ ತಂದೆ ವೆಂಕಟೇಶಪ್ಪ, ಶ್ರೀನಿವಾಸ ಡಿ-1, ನಂತರ ರತ್ನಮ್ಮ ಡಿ-3. 1 ನೇ ಪ್ರತಿವಾದಿ ಸುಗಟೂರಿನಲ್ಲಿ ವಾಸ ಎಂದರೆ ಸರಿ. ಅವರು ವ್ಯವಸಾಯ ಮಾಡುತ್ತಿಲ್ಲ. ಅವರು ಏನು ಕೆಲಸ ಮಾಡುತ್ತಾರೆ ಗೊತ್ತಿಲ್ಲ. ನನ್ನ ಪ್ರಮಾಣಪತ್ರದಲ್ಲಿ 1 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಾರೆ ಎಂದು ಹೇಳಿದ್ದೇನೆ ಎಂದರೆ ಸರಿ. ಮುನಿವೆಂಕಟಪ್ಪನಿಗೆ 3 ಎಕರೆ 15 ಗುಂಟೆ ಜಮೀನು ಇದೆ. ದಾವಾ ಆಸ್ತಿ ಹೊರತು ಪಡಿಸಿ ಅವರಿಗೆ ಬೇರೆ ಆಸ್ತಿ ಇರುವುದಿಲ್ಲ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿ ಸ್ವಾಧೀನ ಇದ್ದಾರೆಂದರೆ ಸರಿಯಲ್ಲ. ನಮಗೂ ಮತ್ತು 1 ನೇ ಪ್ರತಿವಾದಿಗೂ ಸಂಬಂಧ ಸರಿ ಇಲ್ಲ. 2000 ಇಸವಿಯಿಂದಲೂ ನಮಗೆ ಮನಸ್ತಾಪ ಇದೆ. ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಸುಗಟೂರಿನಲ್ಲಿ ಬೇರೆ ಬೇರೆ ಮನೆಯಲ್ಲಿ ವಾಸ ಇದ್ದರು. ಆ ರೀತಿ ಬೇರೆಬೇರೆ ಮನೆಗಳಲ್ಲಿ ವಾಸ ಇದ್ದ ಬಗ್ಗೆ ದಾಖಲೆಗಳು ಇದೆಯಾ ಎಂದರೆ ನಮ್ಮದು ಜಮೀನಿನಲ್ಲಿ ಮನೆ ಇದೆ ಎಂದು ಮಾತ್ರ ಉತ್ತರಿಸಿದ್ದಾರೆ. ಬೇರೆ ಬೇರೆ ಮನೆಯಲ್ಲಿ ವಾಸ ಇರದ ಕಾರಣ ದಾಖಲೆಗಳು ಹಾಜರು ಪಡಿಸಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ಮುನಿವೆಂಕಟಪ್ಪ ನನ್ನ ತಾತ ನಮ್ಮ ಜೊತೆ ನನ್ನ ಚಿಕ್ಕಂದಿನಿಂದಲೂ ವಾಸ ಇದ್ದರು. ಈಗ ನನಗೆ ತೋರಿಸಿದ ಪಡಿತರ ಚೀಟಿಯಲ್ಲಿ ನನ್ನ ತಾತ ಮತ್ತು ನನ್ನ ಅಜ್ಜಿ ನಾರಾಯಣಮ್ಮ ಕಂಡು ಬರುತ್ತಾರೆ. ಅದನ್ನು ನಿಡಿ-1 ಎಂದು ಗುರುತಿಸಲಾಯಿತು. 2010 ರಿಂದ ನನ್ನ ಅಜ್ಜ ಅಜ್ಜಿ ಪ್ರತ್ಯೇಕ ವಾಸ ಇದ್ದಾರೆ ಎಂದು ಪಡಿತರ ಚೀಟಿ ಸರ್ಕಾರದವರು ನೀಡಿದ್ದಾರೆ ಎಂದರೆ ನಮ್ಮ ಜಮೀನಿನಲ್ಲಿಯೇ ಎರಡು ಮನೆ ಇವೆ, ಒಂದು ಮನೆಯಲ್ಲಿ ಅವರು ಇನ್ನೊಂದು ಮನೆಯಲ್ಲಿ ನಾವು ವಾಸ ಇದ್ದೆವು ಎಂದು ಹೇಳಿರುತ್ತಾರೆ. ನಿಡಿ-1 ರಲ್ಲಿ ಕುಟುಂಬ ಸದಸ್ಯರ ವಿವರಗಳು ಇಲ್ಲ ಎಂದರೆ ಸರಿ.

ಕೋಲಾರದ ವಿಳಾಸದಲ್ಲಿ ನನ್ನ ಅಜ್ಜ ವಾಸ ಇದ್ದ ಬಗ್ಗೆ ಮತದಾರರ ಚೀಟಿ, ಪಡಿತರ ಚೀಟಿ, ಆಧಾರ್ ಕಾರ್ಡ್ ಇರುವುದಿಲ್ಲ. ನನ್ನ ತಾತ ಸುಗಟೂರಿನಲ್ಲಿ ಮೃತ ಪಟ್ಟಿದ್ದಾರೆ. ನಿಪಿ-3 ರಿಂದ ನಿಪಿ-5 ದಾಖಲೆ ನಾನೇ ಪಡೆದು, ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನಿಪಿ-5 ವಂಶವೃಕ್ಷ ಪ್ರಮಾಣಪತ್ರಕ್ಕೆ ನಾನೇ ಹೇಳಿ ಬರೆಯಿಸಿಕೊಂಡು ಬಂದಿದ್ದೇನೆ ಎಂದರೆ ಸರಿ. ನಿಪಿ-2 ನಾನೇ ಅರ್ಜಿ ಸಲ್ಲಿಸಿ ತಾಲ್ಲೂಕು ಕಛೇರಿಯಲ್ಲಿ ಪಡೆದುಕೊಂಡಿದ್ದೇನೆ. ನಾನೇ ನನ್ನ ಅಜ್ಜನ ಮರಣ ದಿನಾಂಕವನ್ನು ತಾಲ್ಲೂಕು ಕಛೇರಿಗೆ ಕೊಟ್ಟಿದ್ದೇನೆ. ನಿಪಿ-1 ವಿಲ್ ನಾಮೆ ನನ್ನ ತಾತ ನನಗೆ ಕೊಟ್ಟಿದ್ದಾರೆ.

ನಿಪಿ-1 ನೋಂದಣಿಯಾಗುವ ಕಾಲಕ್ಕೆ ನಾನು ತಹಸೀಲ್ದಾರ್ ಕಛೇರಿಯಲ್ಲಿ ಇರಲಿಲ್ಲ. ನಿಪಿ-1 ನ್ನು ಓದಿ ತಿಳಿದು ಕೊಂಡಿದ್ದೇನೆ. ನಿಪಿ-1 ರಲ್ಲಿ ನನ್ನ ತಾತ ಸುಗಟೂರು ವಾಸಿ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ-1 ರ ಮಾಡುವ ಕಾಲಕ್ಕೆ ನನ್ನ ಅಜ್ಜನಿಗೆ ಅನಾರೋಗ್ಯ ಎಂದು ಅದರಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ಅವರಿಗೆ ಸ್ವಲ್ಪ ಕಾಲಿನ ತೊಂದರೆ ಇತ್ತು. ನನ್ನ ತಾತನ ಬಲಗಾಲು ತೊಂದರೆ ಇತ್ತು, ಮಾತ್ರೆ ತೆಗೆದುಕೊಳ್ಳುತ್ತಿದ್ದರು, ನಡೆಯಲು ಆಗುತ್ತಿರಲಿಲ್ಲ. ತಾತನನ್ನು ಇತ್ತೀಚೆಗೆ ಆಸ್ಪತ್ರೆಗೆ ತೋರಿಸಿದದಾಖಲೆಗಳು ಇವೆ. ಸದರಿ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ನಾನೇ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೆ. ನೋಂದಣಿ ಕಛೇರಿಗೆ ತಾತನನ್ನು ನಾನು ಕರೆದುಕೊಂಡು ಹೋಗಿಲ್ಲ. ನಿಪಿ-1 ರ ಕಾಲಕ್ಕೆ ನನ್ನ ತಾತನ ಆರೋಗ್ಯ ಸಂಪೂರ್ಣ ಹದಗೆಟ್ಟಿತ್ತು ಎಂದರೆ ಸರಿಯಲ್ಲ. 2020-21 ರಲ್ಲಿ ನನ್ನ ತಾತನಿಗೆ 86 ವರ್ಷ ವಯಸ್ಸಾಗಿತ್ತು, ಅವರಿಗೆ ಕಣುಣ ಕಾಣುತ್ತಿತ್ತು, ಕಿವಿ ಕೇಳಿಸುತ್ತಿತ್ತು, 2020-21 ರಲ್ಲಿ ನನ್ನ ತಾತನಿಗೆ 90 ಕ್ಕೂ ಹೆಚುಚ ಪ್ರಾಯವಾಗಿತ್ತು ಎಂದರೆ ಸರಿಯಲ್ಲ. ಅವರಿಗೆ ಕಣ್ಣು ಕಾಣುತ್ತಿರಲಿಲ್ಲ, ಕಿವಿ ಕೇಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾತನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇನೆ ಎಂದು ನೋಂದಣಿ ಕಛೇರಿಗೆ ಕರೆದುಕೊಂಡು ಹೋಗಿ ಅವರಿಗೆ ತಿಳಿಯದಂತೆ ಅವರ ಹೆಬ್ಬೆಟ್ಟುಗಳನ್ನು ನಿಪಿ-1 ರ ಮೇಲೆ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಬಗ್ಗೆ ನನ್ನ ತಾತನ ಮರಣಾನಂತರ ಪ್ರತಿವಾದಿಗಳಿಗೆ ತಿಳಿಸಿಲ್ಲ. ನನ್ನ ತಾತ ಕಾಲವಾದ ಬಳಿಕ ಆತನ ಅಂತ್ಯಕ್ರಿಯೇ ಕಾರ್ಯಗಳನ್ನು ನಾನೇ ಮಾಡಿದ್ದೇನೆ ದಾವಾ ಸ್ವತ್ತಿನಲ್ಲಿ ಸಮಾಧಿ ಇರುತ್ತದೆ. 11 ನೇ ದಿನ ಉತ್ತರ ಕ್ರಿಯಾದಿ ಕಾರ್ಯಕ್ಕೆ ಕಾರ್ಡ್ ಮಾಡಿಸಿದ್ದೆ ಅದರಲ್ಲಿ ನನ್ನ ಹೆಸರು ಹಾಕಿಸಲಿಲ್ಲ, ಆದರೆ ಕುಟುಂಬ ಸದಸ್ಯರು ಎಂದು ಮಾಡಿಸಿದ್ದೆ. ಸದರಿ ಕಾರ್ಡ್ ಇರುವುದಿಲ್ಲ.

ನನ್ನ ತಾತನ ಉತ್ತರ ಕ್ರಿಯಾದಿ ಕಾರ್ಯಕ್ರಮ ನಾನು ಮಾಡದ ಕಾರಣ ಆ ರೀತಿ ದಾಖಲೆ ನನ್ನ ಬಳಿ ಇಲ್ಲ ಎಂದರೆ ಸರಿಯಲ್ಲ. ಆತನ ಮರಣಾ ಪೂರ್ವ ಎಲ್ಲಾ ಕಾರ್ಯಗಳನ್ನು 1 ನೇ ಪ್ರತಿವಾದಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗೆ ಸಂಬಂಧಪಟ್ಟ ಮೂಲ ಗ್ರಾಂಟ್ ಬ್ಯಾಂಕಿನಲ್ಲಿರುತ್ತದೆ. ನನ್ನ ತಂದೆ ಸಾಲ ಪಡೆದಿರುತ್ತಾರೆ. ನನ್ನ ತಂದೆ ಬ್ಯಾಂಕಿನಲ್ಲಿ ಸಾಲ ಪಡೆದ ಬಗ್ಗೆ ನಮೂದು ಇರುತ್ತದೆ. ಸದರಿ ದಾಖಲೆ ಹಾಜರು ಪಡಿಸಲು ತೊಂದರೆ ಇಲ್ಲ. ಪ್ರತಿವಾದಿಗಳ ಜೊತೆ ಮಾತನಾಡದೇ ಇರುವ ಕಾರಣ ಅವರಿಗೆ ನಿಪಿ-1 ರ ಬಗ್ಗೆ ತಿಳಿಸಿರುವುದಿಲ್ಲ. ನನ್ನ ತಾತ ನಿಪಿ-1 ನ್ನು ಮನಃ ಪೂರ್ವಕವಾಗಿ ನನ್ನ ಹೆಸರಿಗೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ದಾವಾ ಆಸ್ತಿಯ ಮೇಲೆ ಸಾಲ ಪಡೆಯುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ದಾಖಲೆಯಲ್ಲಿ ನನ್ನ ತಂದೆ ಸಾಲ ಮಾಡಿದ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಂದ ದಾವಾ ಆಸ್ತಿ ಕಬಳಿಸಬೇಕೆಂದು ಎಲ್ಲಾ ದಾಖಲೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

(ಮಂಜುನಾಥ ಜಿ ಎ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.